# ಸ್ವಾಮಿ ಭೂತೇಶಾನಂದ

## (೧೯೦೧-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

### ಭಾಗ-೪

**೧೧.೮.೧೯೭೭, ಬೇಲೂರು ಮಠ, ಬೆಳಿಗ್ಗೆ ೭ ಘಂಟೆ**

**ನಾನು:** ಸಾಂಖ್ಯ, ಯೋಗದಲ್ಲಿ ಹೇಳಿರುವ 'ಪ್ರಕೃತಿಲೀನ ಪುರುಷ' ಹಾಗೂ ವೇದಾಂತದಲ್ಲಿ ಹೇಳಿರುವ 'ಆಧಿಕಾರಿಕ ಪುರುಷ' ಇವುಗಳಲ್ಲಿ ಏನು ವ್ಯತ್ಯಾಸ?

**ಮಹಾರಾಜ್:** ಆಧಿಕಾರಿಕ ಪುರುಷರು ಭಗವದ್ದರ್ಶನದ ಬಳಿಕ ಲೋಕಶಿಕ್ಷಣವನ್ನು ನೀಡುತ್ತಾರೆ. ಅಧಿಕಾರದಲ್ಲಿರುವ ತನಕ ಪುನಃ ಜನ್ಮತಳೆಯುತ್ತಾರೆ — ಒಂದೆರಡು ಜನ್ಮಗಳಿರ ಬಹುದು. ಪ್ರಕೃತಿಲೀನ ಪುರುಷರು ಪ್ರಕೃತಿಯಲ್ಲಿ ಲೀನವಾಗಿ ಒಂದು ಅಥವಾ ಎರಡು ಕಲ್ಪಗಳ ಕಾಲ ಶರೀರವನ್ನು ಧರಿಸುವರು.

**ನಾನು:** ಠಾಕೂರರ ಪ್ರಥಮ ಸಂನ್ಯಾಸಿ ಶಿಷ್ಯರು ನಾರಾಯಣ ಶಾಸ್ತ್ರಿಗಳಲ್ಲವೆ?

**ಮಹಾರಾಜ್:** ಹೌದು. ಆದರೆ ಅವರು ನಮ್ಮ ಸಂಘಕ್ಕೆ ಸೇರಿದವರಲ್ಲ.

**ನಾನು:** ಅದೇಕೆ?

**ಮಹಾರಾಜ್:** ನಾರಾಯಣ ಶಾಸ್ತ್ರಿಗಳು ನಮ್ಮ ಸಂಘಕ್ಕೆ ಸೇರಲಿಲ್ಲ. ಸಂನ್ಯಾಸ ಪಡೆದು ಅವರು ಹೊರಟುಹೋದರು. ಅವರು ತಮ್ಮ ಸ್ವಂತ ಮುಕ್ತಿಗಾಗಿ ಕಾತರರಾಗಿದ್ದರು. ನಮ್ಮ ಸಂಘದ ಉದ್ದೇಶ ಇದಲ್ಲ.

**ನಾನು:** ಗೌರೀ ಪಂಡಿತರು ಒಂದು ಮಣ ಕಟ್ಟಿಗೆಯನ್ನು ಕೈಯಲ್ಲಿರಿಸಿಕೊಂಡು ಹೋಮ ಮಾಡುತ್ತಿದ್ದರು. ಪಾಶ್ಚಾತ್ಯರಿಗೆ ಇದನ್ನು ನಂಬುವುದು ಕಷ್ಟವೆನಿಸುತ್ತದೆ.

**ಮಹಾರಾಜ್:** ಅವರು ಬೈಬಲ್‌ನ ಪವಾಡಗಳನ್ನು ನಂಬುವುದಿಲ್ಲವೆ? ಏಸುವಿನ ಎಲ್ಲ ಪವಾಡಗಳನ್ನೂ ನಂಬಿದವರಿಗೆ ಇನ್ನೊಂದು ಪವಾಡದಲ್ಲಿ ವಿಶ್ವಾಸವಿಡುವುದು ಸಾಧ್ಯವಾಗದೇಕೆ?

**ನಾನು:** ಶರತ್ ಮಹಾರಾಜರು, 'ಶೂನ್ಯ' ಹಾಗೂ 'ಪೂರ್ಣ' ಒಂದೇ ಎಂದು ಬರೆದಿರುವರಲ್ಲ.

**ಮಹಾರಾಜ್:** 'ಶೂನ್ಯ' ಎಂದರೆ ವೈವಿಧ್ಯತೆ ಇಲ್ಲದ ಸ್ಥಿತಿ. 'ಪೂರ್ಣ' ಎಂದರೆ ವೈವಿಧ್ಯತೆ ಮಾಯವಾಗಿ, ಅದರ ಜಾಗದಲ್ಲಿ ಒಂದೇ ಚೈತನ್ಯ ತತ್ತ್ವ ಉಳಿಯುವುದು.

ಪೂಜ್ಯ ಭೂತೇಶಾನಂದಜಿಯವರು ನನ್ನ 'ಸುಪ್ರೀಂಕೋರ್ಟ್' ಆಗಿದ್ದರು. ಅವರ ಪ್ರತಿಯೊಂದು ಸಿದ್ಧಾಂತವೂ ಅರ್ಥಪೂರ್ಣ, ಯುಕ್ತಿಸಿದ್ಧ, ಶಾಸ್ತ್ರಸಮ್ಮತ ಹಾಗೂ ಸಂದೇಹನಾಶಕವಾಗಿದ್ದವು. ಅವರ ಮಾತುಗಳಲ್ಲಿ ಯಾವ ಗೊಂದಲವೂ ಇರದೆ, ಸ್ಪಷ್ಟವಾಗಿರುತ್ತಿದ್ದವು. ಇತರರ ಅಭಿಪ್ರಾಯವನ್ನು ಬದಿಗಿಟ್ಟು ತಮ್ಮ ಅಭಿಪ್ರಾಯವನ್ನು ನೀಡುತ್ತಿರಲಿಲ್ಲ. ಯಾವುದು ಸತ್ಯವೆಂದು ಖಂಡಿತವಾಗಿ ತಿಳಿದಿದೆಯೋ ಅದನ್ನೇ ಹೇಳುತ್ತಿದ್ದರು. ಇಲ್ಲವಾದರೆ 'ನನಗೆ ಗೊತ್ತಿಲ್ಲ' ಎನ್ನುತ್ತಿದ್ದರು.

**೩೦.೮.೧೯೭೭, ಬೇಲೂರು ಮಠ, ಬೆಳಿಗ್ಗೆ ೭ ಗಂಟೆ**

ಮಠದ ಸಾಧು-ಬ್ರಹ್ಮಚಾರಿಗಳಿಗೆ ಪ್ರತಿದಿನ ಒಂದು ಸಲವಾದರೂ ಮಹಾರಾಜರೊಂದಿಗೆ ಮನಸ್ಸು ಬಿಚ್ಚಿ ಮಾತನಾಡುವ ಅವಕಾಶ ಸಿಗುತ್ತಿತ್ತು. ಇಡೀ ದಿನದಲ್ಲಿ ಈ ಹದಿನೈದು ನಿಮಿಷಗಳಿಗಾಗಿ ಅವರು ಕಾತರರಾಗಿ ಕಾಯುತ್ತಿದ್ದರೆಂದು ಅನೇಕ ಸಾಧು-ಬ್ರಹ್ಮಚಾರಿಗಳು ನನಗೆ ಹೇಳಿದ್ದುಂಟು. ಸಾಧುಗಳು ಬರೀ ಪ್ರಣಾಮ ಮಾಡಿ ಹೊರಟುಹೋಗುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಅವರಿಗೆ ಉತ್ಸಾಹವನ್ನು ನೀಡುತ್ತ, ''ಪ್ರಶ್ನೆ ಕೇಳಿ'' ಎಂದು ಹೇಳುತ್ತಿದ್ದರು. ಮಠದಲ್ಲಿದ್ದಷ್ಟು ದಿನ ನಾನೇ ಪ್ರಧಾನವಾಗಿ ಪ್ರಶ್ನೆ ಹಾಕುವವನಾಗಿದ್ದೆ.

ಮಹಾರಾಜರು ನಡೆದಾಡುವ ವಿಶ್ವಕೋಶದಂತಿದ್ದರು. ಅವರದು ಮುಗಿಯದ ಜ್ಞಾನಭಂಡಾರ. ನಾನು ಅವರಿಂದ ಅನೇಕ ವಿಷಯಗಳನ್ನು ತಿಳಿದುಕೊಂಡಿರುವೆ.

ಇಂದು ನಾನು ಮಂತ್ರದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದೆ. ಮಂತ್ರಶಕ್ತಿ ಹಾಗು ಮಂತ್ರ ಚೈತನ್ಯ ಎಂದರೇನು? ಮಹಾರಾಜರು ಈ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ನೀಡಿದರು. ಅವರು ಸಾಧಕರೂ, ಶಾಸ್ತ್ರಜ್ಞರೂ ಆಗಿದ್ದ ಸಂನ್ಯಾಸಿಗಳು. ಆದ್ದರಿಂದಲೇ ಅವರ ಉತ್ತರಗಳು ನಿಖರವೂ ಮರ್ಮಸ್ಪರ್ಶಿಯೂ ಆಗಿರುತ್ತಿದ್ದವು. ಮಾತಿನ ಮಧ್ಯೆ ಮಹಾರಾಜರು ಹೇಳಿದರು, ''ನಾನು ಮೊದಲ ಸಲ ಬ್ರಹ್ಮಾನಂದಜಿಯವರನ್ನು ಬಲರಾಮ ಮಂದಿರದಲ್ಲಿ ಕಂಡೆ. ತದನಂತರವೂ ಕೆಲವು ಸಲ ಅವರ ದರ್ಶನವನ್ನು ಪಡೆದೆ. ಒಂದು ದಿನ ಮಂದಿರದ ಹಾಲ್‌ನಲ್ಲಿ ಅವರು ನಡೆದಾಡುತ್ತಿದ್ದರು. ತಿಳಿಯದೆ ನಾವು ಅವರಿಗೆ ಪ್ರಣಾಮ ಮಾಡಿದಾಗ ಅವರೆಂದರು, 'ನೋಡಿ, ಇಂದು ನನ್ನ ಹೊಟ್ಟೆ ಚೆನ್ನಾಗಿಲ್ಲ.' ಅಂದರೆ, ಆಗ ಅವರು ಮಾತನಾಡುವ ಮನಸ್ಥಿತಿಯಲ್ಲಿರಲಿಲ್ಲ. ನಾನೆಂದೆ, 'ಸತ್ಪ್ರಕಾಶಾನಂದಜಿಯವರೂ

ಏಕಾಂತದಲ್ಲಿರಲು 'ನಾನು ನಿಮ್ಮನ್ನು ತಡೆಯಲಾರೆ' ಎನ್ನುತ್ತ ಒಂದೆರಡು ಮಾತುಗಳನ್ನಾಡಿ ಜನರಿಂದ ಬಿಡಿಸಿಕೊಳ್ಳುತ್ತಿದ್ದರು.''

**೩೧.೮.೧೯೫೭, ಬೇಲೂರು ಮಠ, ಬೆಳಗ್ಗೆ ೭ ಗಂಟೆ.**

ಮಹಾರಾಜರಿಗೆ ಪ್ರಣಾಮ ಸಲ್ಲಿಸಿ ನಗುತ್ತ ಹೇಳಿದೆ– ''ಮಹಾರಾಜ್ ಇತ್ತೀಚೆಗೆ ಜನರು ಠಾಕೂರರ ಉಪದೇಶವನ್ನು ನಾನಾ ರೀತಿಗಳಲ್ಲಿ ಬಳಸುತ್ತಿದ್ದಾರೆ. 'ಫ್ಯಾಮಿಲಿ ಪ್ಲಾನಿಂಗ್'ಗೆ ಠಾಕೂರರನ್ನು ಉಲ್ಲೇಖಿಸುತ್ತ ವಿಜ್ಞಾಪನೆಯಲ್ಲಿ ಮುದ್ರಿಸಿದ್ದಾರೆ, 'ಒಂದೆರಡು ಮಕ್ಕಳಾದ ಬಳಿಕ ದಂಪತಿಗಳು ಅಣ್ಣ–ತಂಗಿಯ ರಂತಿರಬೇಕು'' ಎಂದು. ನಾನು ಕಲ್ಕತ್ತದ ಕಾಲೇಜಿನಲ್ಲಿ ಓದು ತ್ತಿದ್ದಾಗ, ದುರ್ಗಾಪೂಜೆಯ ಮಂಟಪದಲ್ಲಿ ಲೌಡ್ ಸ್ಪೀಕರ್ ನಿಂದ ಕೇಳಿಬರುತ್ತಿತ್ತು : ''ಶ್ರೀರಾಮಕೃಷ್ಣರು ಹೇಳುತ್ತಾರೆ, ಪ್ರಣಾಮ ದೊಂದಿಗೆ ಪ್ರಣಾಮಿ (ಕಾಣಿಕೆ) ಸಲ್ಲಿಸದಿದ್ದರೆ, ಪ್ರಣಾಮ ವ್ಯರ್ಥ'' ಎಂದು.

**ಮಹಾರಾಜ್:** (ಮಧುರವಾಗಿ ನಗುತ್ತ) ನೀನು ನನಗೇನು ಕೊಡುತ್ತೀಯಾ?

ಬಳಿಕ ಒಂದು ಕಥೆಯನ್ನು ಹೇಳಲಾರಂಭಿಸಿದರು: ''ನಾನು ಕಿಶನ್‌ಪುರದಲ್ಲಿದ್ದಾಗ ಸ್ವಾಮಿ ಶುದ್ಧಾನಂದರೂ ಅಲ್ಲಿದ್ದರು. ಒಂದು ದಿನ ನಮ್ಮ 'Universal ಚಿಕ್ಕಮ್ಮ' (ಓರ್ವ ಭಕ್ತೆ) ಶುದ್ಧಾನಂದಜಿಯವರನ್ನು ಕೇಳಿದರು, ''ಮಹಾರಾಜ್, ಕಾಶಿ ಯಲ್ಲಿ ಸತ್ತರೆ ಮುಕ್ತಿ ಎನ್ನುತ್ತಾರೆ. ಇದು ನಿಜವೆ?'' ಶುದ್ಧಾ ನಂದರು ಹೇಳಿದರು, ''ಹೌದು, ಶಾಸ್ತ್ರಗಳು ಹಾಗೆಂದೇ ಹೇಳು ತ್ತವೆ.'' ಚಿಕ್ಕಮ್ಮ ಕೇಳಿದರು, 'ನಿಮ್ಮ ಅಭಿಪ್ರಾಯವೇನು?'' ಶುದ್ಧಾ ನಂದಜಿ ಉತ್ತರಿಸಿದರು: ''ನಾನೇನಾದರೂ ಇದನ್ನು ಪೂರ್ಣ ವಾಗಿ ನಂಬಿದ್ದರೆ, ಕಾಶಿಗೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ!''

**ನಾನು:** ಮಹಾರಾಜ್, ೧೯೭೦ರಲ್ಲಿ ಕಾಶಿಯಲ್ಲಿದ್ದಾಗ ತಾರಾ ಪ್ರಸನ್ನ ಮಹಾರಾಜರನ್ನು ಕೇಳಿದ್ದೆ – ಕಾಶಿಯಲ್ಲಿ ಸತ್ತರೆ ಮುಕ್ತಿ ಸಿಗುತ್ತದೋ ಇಲ್ಲವೋ ಎಂದು. ಅವರು, ''ನಾವೆಲ್ಲ ವೃದ್ಧ ಸಾಧು ಗಳು ಸಾಯಲೆಂದು ಇಲ್ಲಿದ್ದೇವೆ. ನೀನೊಬ್ಬ ಚಿಕ್ಕ ಹುಡುಗ. ನಮ್ಮನ್ನು ಗೊಂದಲಗೊಳಿಸಲು ಪ್ರಯತ್ನಿಸುತ್ತಿರುವೆಯಾ?'' ಎನ್ನುತ್ತ ಚೆನ್ನಾಗಿ ಬೈದರು. ಅವರು ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ನುಡಿಗಳನ್ನು ಉಲ್ಲೇಖಿಸಿದರು. ನಾನೆಂದೆ, ''ಜ್ಞಾನಾತ್ ಮೋಕ್ಷಃ'' ನಂತರ ಅವರು ಹೇಳಿದರು: ''ಚೇತನಾ ನಂದ, ನೀನೂ ಸರಿ, ನಾನೂ ಸರಿ. ಶಿವನು ಕಡೆಯಲ್ಲಿ ಜ್ಞಾನ ವನ್ನು ನೀಡುವನು.''

ಅದಾದ ನಂತರ ನಾನು ಸಾಧುಜೀವನದ ಬಗ್ಗೆ ಪ್ರಶ್ನಿಸಿದೆ, ''ಅನೇಕ ಸಾಧುಗಳು ತಮಗೆ ಬಹಳ ಕೆಲಸವೆಂದೂ, ಆದ್ದರಿಂದ ಅಧ್ಯಯನ ಹಾಗು ಜಪ–ಧ್ಯಾನಗಳಿಗೆ ಅಷ್ಟಾಗಿ ಸಮಯ ವಿಲ್ಲವೆಂದೂ ದೂರುತ್ತಾರೆ.''

**ಮಹಾರಾಜ್:** ''ಕೆಲವು ಸಾಧುಗಳು ತುಂಬ ಕೆಲಸ ಮಾಡು ತ್ತಾರೆ, ಮತ್ತೆ ಕೆಲವರು ಕೆಲಸ ಮಾಡುವುದನ್ನೇ ಇಷ್ಟಪಡುವು ದಿಲ್ಲ. ವಿಷಯವು ಕರ್ಮದ ಬಗ್ಗೆ ಈ ಸಾಧುಗಳ ದೃಷ್ಟಿಕೋನ ವನ್ನು ಅವಲಂಬಿಸಿದೆ. ಮಾಧವಾನಂದಜಿ ಹೇಳುತ್ತಿದ್ದರು, 'ಹೇಗೋ ನಾವು ಸ್ವಾಮೀಜಿ ಹೇಳಿದ ಪೂಜೆ ಮತ್ತು ಕರ್ಮದ ವಿಷಯವನ್ನು ಅರ್ಥಮಾಡಿಕೊಂಡಿದ್ದೇವೆ; ಆದರೆ ನಾವಿನ್ನೂ ಕರ್ಮವೇ ಪೂಜೆ ಎಂಬುದನ್ನು ಅನುಸರಿಸಲಾಗಿಲ್ಲ' ಅಂತ. ಭಗವಂತನಲ್ಲಿ ಆತ್ಮಸಮರ್ಪಣೆ ಮಾಡುತ್ತ ಮಾಡುತ್ತ ಈ ಮನೋಭಾವ ಬರುತ್ತದೆ. ಮತ್ತೆ ಮತ್ತೆ ಪ್ರಯತ್ನಿಸಬೇಕು.''

ಮಹಾರಾಜರು ಸಾಧು–ಬ್ರಹ್ಮಚಾರಿಗಳನ್ನು ಉದ್ದೇಶಿಸಿ ಒಂದು ದಿನ ಹೇಳಿದರು: ಸಾಧು ಬ್ರಹ್ಮಚಾರಿಗಳು ಸುಮ್ಮನೆ ಕುಳಿತು ತಿನ್ನುವುದು ಸರಿಯಲ್ಲ. ಎಲ್ಲರೂ ಏನಾದರೂ ಸ್ವಲ್ಪ ಕೆಲಸವನ್ನಾದರೂ ಮಾಡಬೇಕು. ನಗುತ್ತ ಮುಂದುವರಿಸಿದರು, ''ಆದರೆ ನಾನು ಕುಳಿತು ತಿನ್ನುವೆ. ಮುದುಕನಾಗಿಬಿಟ್ಟಿದ್ದೇನೆ; ಯಾವ ಕೆಲಸವನ್ನೂ ಮಾಡುವುದಿಲ್ಲ.'' ಅದಕ್ಕೆ ಉತ್ತರವಾಗಿ ಒಬ್ಬರು ಸಾಧುಗಳು ಹೇಳಿದರು, ''ಮಹಾರಾಜ್, ನೀವು ನನ ಗಿಂತ ಹೆಚ್ಚು ಕೆಲಸವನ್ನು ಮಾಡುತ್ತೀರಿ. ನೀವು ದೀಕ್ಷೆಯನ್ನು ನೀಡುತ್ತೀರಿ, ಸಾಧು–ಭಕ್ತರಿಗೆ ಉಪದೇಶವನ್ನೂ ಕೊಡುತ್ತೀರಿ –ಇದೆಲ್ಲ ಏನು ಕಡಿಮೆ ಕೆಲಸವೆ?''

ಮತ್ತೊಂದು ದಿನ ನಾನು ಹೇಳಿದೆ : ''ಮಠ–ಮಿಷನ್ನಿನ ಭವಿಷ್ಯದ ಬಗ್ಗೆ ನಿಮಗೇನನ್ನಿಸುತ್ತದೆ?'' ಅಂದು ಮಹಾರಾಜರು ಉತ್ಸಾಹಭರಿತರಾಗಿ ಸಾಧುಗಳನ್ನೆಲ್ಲ ಉದ್ದೇಶಿಸಿ ಗಟ್ಟಿಯಾಗಿ ಹೇಳಿದರು: ''ಐಶ್ವರ್ಯವು **ಸ–ರ್ವ–ನಾ–ಶ**–ವನ್ನು ಕರೆತರು ತ್ತದೆ. ನೋಡಿ, ಈಗ ಮಠ–ಮಿಷನ್ನಿಗೆ ಹಣ ಬರುತ್ತಿದೆ. ಜನರು ಠಾಕೂರರ ಕಾರ್ಯವೆಂದು ದಾನ ಮಾಡುತ್ತಾರೆ. ನಮ್ಮ ನಡುವೆ ವಿಲಾಸಕರ ಜೀವನವು ಬಾರದಿರಲಿ. ಸಾಧುಜೀವನಕ್ಕೆ ಅಗತ್ಯ ವಾಗಿ ಬೇಕಾದುವೆಂದರೆ ತ್ಯಾಗ, ವೈರಾಗ್ಯ ಹಾಗೂ ಪವಿತ್ರತೆ. ಅರ್ಥವು ಅನರ್ಥಕ್ಕೆ ಕಾರಣವಾಗುತ್ತದೆ.'' 'ಸರ್ವನಾಶ' ಎಂಬ ಶಬ್ದವು ಈಗಲೂ ಕಿವಿಯಲ್ಲಿ ಮೊಳಗುತ್ತದೆ. ಮಹಾರಾಜರು ಅಷ್ಟು ಜೋರಾಗಿ ಮಾತನಾಡಿದ್ದನ್ನು ನಾನೆಂದೂ ಕೇಳಿಲ್ಲ.

**೧.೧.೧೯೭೭: ಬೇಲೂರು ಮಠ, ಬೆಳಗ್ಗೆ ೭ ಗಂಟೆ**

**ನಾನು:** ಮುಂಡಕೋಪನಿಷತ್ತಿನಲ್ಲಿ *(೩.೨.೯)* 'ಬ್ರಹ್ಮವೇದ ಬ್ರಹ್ಮೈವ ಭವತಿ' ಎಂದಿದೆ. ಹಾಗಾದರೆ ವೇದಾಂತದಲ್ಲಿ 'ಬ್ರಹ್ಮ ವಿದ, ಬ್ರಹ್ಮವಿದ್ವರ, ಬ್ರಹ್ಮವಿದ್ವರೀಯಾನ್, ಬ್ರಹ್ಮವಿದ್ವರಿಷ್ಠ' ಎಂದು ಏಕೆ ಹೇಳುತ್ತಾರೆ?

**ಮಹಾರಾಜ್:** ಈ ರೀತಿಯಾಗಿ ನಾವು ಇತರರನ್ನು ಕುರಿತು ವಿಚಾರ ಮಾಡುತ್ತೇವೆ. ಬ್ರಹ್ಮವಿದರಲ್ಲಿ ಯಾವ gradation ಕೂಡ ಇಲ್ಲ. ನಮ್ಮ ದೃಷ್ಟಿಕೋನದಲ್ಲಿ ಮಾತ್ರ ಭೇದವಿದೆ, ಅಷ್ಟೆ. ಠಾಕೂರರು ಹೇಳುವಂತೆ, ಒಬ್ಬನು ಹಾಲನ್ನು ನೋಡಿದ್ದಾನೆ, ಇನ್ನೊಬ್ಬ ಅದನ್ನು ಮುಟ್ಟಿದ್ದಾನೆ, ಮತ್ತೊಬ್ಬ ಅದನ್ನು ಕುಡಿದು ಶಕ್ತಿಯನ್ನು ಪಡೆದಿದ್ದಾನೆ. ಆದರೆ ಬ್ರಹ್ಮಜ್ಞರಿಗೆ ಎಲ್ಲರೂ ಸಮಾನ.

**ಸನ್ಯಾಸಿಯೊಬ್ಬರು:** ಹಾಲಿನ ಉದಾಹರಣೆಯಲ್ಲಿ ಭೇದವಿದೆಯಲ್ಲ!

**ಮಹಾರಾಜ್:** ಯಾರು ಬ್ರಹ್ಮನಲ್ಲಿ ಮಗ್ನರೋ, ಅವರಿಗೆ ದ್ವೈತವೆಂಬುದು ನಾಶವಾಗುತ್ತದೆ. ಅವರು 'ವರೀಯಾನ್' ಅಥವ 'ವರಿಷ್ಠ' ಎಂಬುದರಲ್ಲಿ ವ್ಯತ್ಯಾಸವನ್ನು ಕಾಣುವುದಿಲ್ಲ.

**ನಾನು:** ಮಹಾರಾಜ್, ಸಾಧು ಜೀವನದ ಕುರಿತು ಏನಾದರೂ ಹೇಳಿ.

**ಮಹಾರಾಜ್:** ಅದನ್ನು ಅನೇಕ ಸಲ ಹೇಳಿದ್ದೇನೆ. ಶ್ರೀರಾಮಕೃಷ್ಣರನ್ನು ಪೂರ್ಣ ಹೃದಯದಿಂದ ಪ್ರೀತಿಸಿ. ಅರ್ಧ ಹೃದಯದಿಂದ ಅಲ್ಲ.

**ನಾನು:** ಪಾಶ್ಚಾತ್ಯರಲ್ಲಿ ಅನೇಕರು ನಮ್ಮ ಬಳಿ ಬರುತ್ತಾರೆ ಕೆಲವರು divorced, ಕೆಲವರು depressed, ಕೆಲವರು deluded.

**ಮಹಾರಾಜ್:** ಕಾಮ-ಕಾಂಚನಗಳೇ ಮಾಯೆ. ಆಸೆಗಳನ್ನು ಬಿಡದಿದ್ದರೆ ಏನೂ ಸಾಧ್ಯವಿಲ್ಲ. ಮೋಹವನ್ನು ಕತ್ತರಿಸಲು ತ್ಯಾಗದ ಚಾಕು ಅಗತ್ಯ. ಕಣ್ಣಿನ ಪದರವನ್ನು ಕತ್ತರಿಸಲು ಲೇಸರ್ ಆಪರೇಷನ್ ಮಾಡಬೇಕಾಗುತ್ತದೆ. ಪ್ರಾಪಂಚಿಕ ಭೋಗ ವಸ್ತುಗಳನ್ನು ಬಿಟ್ಟು ಆದರ್ಶವನ್ನು ಪ್ರೀತಿಸಬೇಕು.

ನಾನೀಗ ಭಕ್ತರಿಗೆ ಹೇಳುತ್ತೇನೆ, ''ನೋಡಿ, ಹೆಚ್ಚಿನ ಉಪದೇಶಗಳನ್ನು ಪಾಲಿಸಬೇಕಾಗಿಲ್ಲ. ನಿಮ್ಮ ದೈನಂದಿನ ಜೀವನದಲ್ಲಿ ಭೂತೇಶಾನಂದಜಿಯವರ 'ಪಂಚಶೀಲ'ವನ್ನು ಪಾಲಿಸಿದರೆ ಬೇಕಾದಷ್ಟಾಯಿತು. ೧) ಯಾರಿಗೂ ಎಂದೂ ಕೇಡನ್ನು ಬಗೆಯಬೇಡ ೨) ಸತ್ಯವನ್ನೆಂದೂ ಬಿಡಬೇಡ ೩) ಕೊಟ್ಟ ಮಾತನ್ನು ತಪ್ಪಬೇಡ ಹಾಗೂ ಯಾರನ್ನೂ ವಂಚಿಸಬೇಡ ೪) ಇಂದ್ರಿಯಗಳನ್ನು ನಿನ್ನ ವಶದಲ್ಲಿರಿಸಿಕೊ, ಹಾಗೂ ೫) ವಿಲಾಸಕರ ಜೀವನವನ್ನು ಸಾಧ್ಯವಾದಷ್ಟು ವರ್ಜಿಸಿ ಸರಳ ಜೀವನವನ್ನು ನಡೆಸು.

ಅವರ ಅಹಂಕಾರರಹಿತ ಪವಿತ್ರ ಜೀವನ ಹಾಗೂ ಪ್ರೀತಿ-ಸ್ನೇಹಗಳನ್ನು ಸ್ಮರಿಸಿಕೊಂಡರೆ ಹೃದಯವು ಆನಂದಭರಿತವಾಗುತ್ತದೆ, ಚಕ್ಷುಗಳು ಜಲಪೂರಿತವಾಗುತ್ತವೆ.

**ಯುವಚೇತನ**



## ಧರ್ಮದ ಅನುಷ್ಠಾನ

ಧ್ಯಾನ ಎಂದರೆ ಏನು? ಧ್ಯಾನ ಎಂದರೆ ಮೇಲೆ ಹೇಳಿದವುಗಳನ್ನೆಲ್ಲಾ ಎದುರಿಸುವ ಶಕ್ತಿ. ಪ್ರಕೃತಿ, 'ನೋಡು ಅಲ್ಲೊಂದು ಚೆನ್ನಾದ ವಸ್ತುವಿದೆ' ಎಂದು ಹೇಳಬಹುದು. ನಾನು ನೋಡುವುದಿಲ್ಲ. 'ಇಲ್ಲಿ ಚೆನ್ನಾದ ಗಂಧವಿದೆ ಅದನ್ನು ಮೂಸಿನೋಡು' ಎನ್ನಬಹುದು. ನಾನು ನನ್ನ ಮೂಗಿಗೆ 'ಅದನ್ನು ಮೂಸಿ ನೋಡಬೇಡ' ಎಂದರೆ ಅದನ್ನು ನೋಡುವುದಿಲ್ಲ, ಕಣ್ಣುಗಳು ನೋಡುವುದಿಲ್ಲ. ಪ್ರಕೃತಿ ಮತ್ತೊಂದು ಭಯಾನಕವಾದ ಪ್ರಸಂಗವನ್ನು ತರುವುದು. ನನ್ನ ಮಕ್ಕಳಲ್ಲಿ ಒಂದನ್ನು ಕೊಲ್ಲುವುದು. 'ಹೇ ಮೂರ್ಖ, ಈಗ ಕುಳಿತುಕೊಂಡು ಅಳು, ದುಃಖದ ಆಳಕ್ಕೆ ಹೋಗು' ಎನ್ನುವುದು. 'ಇಲ್ಲ, ನಾನು ಹಾಗೆ ಮಾಡುವುದಿಲ್ಲ' ಎನ್ನುತ್ತೇನೆ. ನಾನು ಅಲ್ಲಿಂದ ನೆಗೆಯುತ್ತೇನೆ. ನಾನು ಸ್ವತಂತ್ರನಾಗಬೇಕು. ನೀವು ಕೆಲವು ವೇಳೆ ಇದನ್ನು ಅಭ್ಯಾಸಮಾಡಿ. ಧ್ಯಾನದಲ್ಲಿ ನಿಮ್ಮ ಸ್ವಭಾವವನ್ನು ಬದಲಾಯಿಸಬಹುದು. ನಿಮಗೆ ಅಂತಹ ಶಕ್ತಿ ಇದ್ದರೆ ಅದೇ ಸ್ವಾತಂತ್ರ್ಯವಲ್ಲವೆ? ಸ್ವರ್ಗವಲ್ಲವೆ? ಇದೇ ಧ್ಯಾನದ ಶಕ್ತಿ.

ನಾವು ಇದನ್ನು ಹೇಗೆ ಪಡೆಯಬಹುದು? ಹಲವು ರೀತಿ ನಾವು ಇದನ್ನು ಪಡೆಯಬಹುದು. ಪ್ರತಿಯೊಂದು ಸ್ವಭಾವದವರಿಗೂ ಒಂದೊಂದು ಮಾರ್ಗವಿದೆ. ಆದರೆ ಅವುಗಳಲ್ಲೆಲ್ಲಾ ಸಾಮಾನ್ಯವಾದ ಒಂದು ವಿಷಯ ಇದೆ. ಅದೇ ಮನೋನಿಗ್ರಹ. ಮನಸ್ಸು ಒಂದು ಸರೋವರದಂತೆ ಇದೆ. ಅದರಲ್ಲಿ ಹಾಕಿದ ಪ್ರತಿಯೊಂದು ಕಲ್ಲಿನಿಂದಲೂ ಅಲೆಗಳು ಏಳುವುವು. ಈ ಅಲೆಗಳು ನಮ್ಮ ಸ್ವಭಾವವನ್ನು ನೋಡುವುದಕ್ಕೆ ಬಿಡುವುದಿಲ್ಲ. ಸರೋವರದ ಮೇಲೆ ಹುಣ್ಣಿಮೆಯ ಚಂದ್ರ ಪ್ರಕಾಶಿಸುತ್ತಿರುವನು. ಆದರೆ ಸರೋವರದ ಮೇಲಿನ ಭಾಗ ಪ್ರಕ್ಷುಬ್ಧವಾಗಿರುವುದರಿಂದ ಸರಿಯಾದ ಪ್ರತಿಬಿಂಬ ಬೀಳುವುದಿಲ್ಲ. ಅದು ಪ್ರಶಾಂತವಾಗಲಿ. ಪ್ರಕೃತಿ ಅಲೆಯನ್ನು ಎಬ್ಬಿಸದಂತೆ ನೋಡಿಕೊಳ್ಳಿ. ನೀವು ಸುಮ್ಮನೆ ಇರಿ. ಸ್ವಲ್ಪ ಕಾಲವಾದ ಮೇಲೆ ಅದು ನಿಮ್ಮನ್ನು ಬಿಟ್ಟುಬಿಡುವುದು. ಆಗ ನೀವು ಯಾರು ಎಂಬುದು ಗೊತ್ತಾಗುವುದು. ದೇವರು ಆಗಲೆ ಇಲ್ಲಿರುವನು, ಆದರೆ ಮನಸ್ಸು ಚಂಚಲವಾಗಿದೆ. ಅದು ಯಾವಾಗಲೂ ಇಂದ್ರಿಯಗಳ ಕಡೆ ಧಾವಿಸುತ್ತಿದೆ. ನೀವು ಇಂದ್ರಿಯಗಳ ಬಾಗಿಲನ್ನು ಮುಚ್ಚಿದರೂ ಮನಸ್ಸು ತೆಪ್ಪಗಿರುವುದಿಲ್ಲ. ಈ ಕ್ಷಣ ನಾನು ಚೆನ್ನಾಗಿರುವೆನು, ದೇವರನ್ನು ಕುರಿತು ಚಿಂತಿಸುವೆನು ಎಂದು ಆಲೋಚನೆ ಮಾಡುತ್ತೇನೆ. ಒಂದು ಕ್ಷಣದಲ್ಲಿ ನನ್ನ ಮನಸ್ಸು ಲಂಡನ್ನಿಗೆ ಹಾರುವುದು. ಅಲ್ಲಿಂದ ಅದನ್ನು ಸೆಳೆದುಕೊಂಡು ಬಂದರೆ ನ್ಯೂಯಾರ್ಕಿಗೆ ಅದು ಹಾರುವುದು. ನಾನು ಹಿಂದೆ ಅಲ್ಲಿ ಏನು ಮಾಡಿದ್ದನೋ ಅದನ್ನು ಆಲೋಚಿಸುವುದು. ಧ್ಯಾನದ ಶಕ್ತಿಯಿಂದ ನಾವು ಚಿತ್ತವೃತ್ತಿಯನ್ನು ನಿಲ್ಲಿಸಬೇಕು.

*('ಧರ್ಮದ ಅನುಷ್ಠಾನ' ಉಪನ್ಯಾಸ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು. ೨೧೭)*